ದಿನಾಂಕಃ 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಃ ವಾದಿ ಪರ ಶ್ರೀ.ಜಿ.ಐ.ಝುಡ್ ವಕೀಲರಿಂದಃ**

1. ಈ ದಾವೆಯನ್ನು ವಾದಿಯವರು ನನ್ನ ವಿರುದ್ಧ ದಾಖಲಿಸಿದ್ದಾರೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ಗೊತ್ತಿವೆ. ವಾದಿಗೆ ಮತ್ತು ನನ್ನ ಗಂಡನಿಗೆ ಒಳ್ಳೆಯ ಸಂಬಂಧ ಹಾಗೂ ವಹಿವಾಟಿ ಇತ್ತು ಎಂದರೆ ಸರಿ. ನನ್ನ ಗಂಡ ಪ್ರಾಪಂಚಿಕ ಅಡಚಣೆಗೊಸ್ಕರ 4 ಸಲ ತಲಾ 65 ಸಾವಿರ ರೂಪಾಯಿಯಂತೆ ಪ್ರಾಮಿಸರಿ ನೋಟ ಬರೆದುಕೊಟ್ಟು ವಾದಿಯಿಂದ ಹಣ ಪಡೆದುಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ. ವಾದಿ ಖೊಟ್ಟಿ ದಾವೆ ಮಾಡಿದ್ದಾರೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ವಾದಿಯಿಂದ ನನ್ನ ಗಂಡ ಸಾಲ ಪಡೆದಿರುವ ಬಗ್ಗೆ ನನಗೆ ಗೊತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ಮೃತಪಡುವ ಮುಂಚೆ ವಾದಿಯಕಡೆಯಿಂದ ಹಣ ಪಡೆದಿದ್ದರು ಎಂದರೆ ಸರಿಯಲ್ಲ. ವಾದಿಯ ಜೊತೆ ವ್ಯವಹಾರ ಮಾಡಿದ ಒಂದು ತಿಂಗಳ ನಂತರ ಅನಾರೊಗ್ಯವಾಗಿ ಶಿರಗುಪ್ಪಿ ಗ್ರಾಮದಲ್ಲಿ ಮೃತರಾದರು ಎಂದರೆ ಸರಿಯಲ್ಲ. ನನ್ನ ಗಂಡ ಮೃತರಾದ ನಂತರ ವಾದಿ ನಮ್ಮ ಮನೆಗೆ ಬಂದಿಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಮೃತರಾದ ನಂತರ ವಾದಿ ನಮ್ಮ ಮನೆಗೆ ಬಂದಿದ್ದಾಗ ನನ್ನ ಗಂಡ ಅವರ ಜೊತೆ ಮಾಡಿದ ವ್ಯವಹಾರದ ಬಗ್ಗೆ ನನಗೆ ಹೇಳಿದ್ದರು ಎಂದರೆ ಸರಿಯಲ್ಲ.

2. ನನ್ನ ಗಂಡನಿಗೆ ಜಮೀನು ಇದ್ದು ಒಟ್ಟು 1 ಎಕರೆ ಅದರಲ್ಲಿ 1/3 ಅಂಶ ಭಾಗ ಇದೆ. ವಾದಿಗೆ ಹಣ ಕೊಡಬಾರದು ಎನ್ನುವ ಉದ್ದೇಶದಿಂದ ಸದರಿ ಜಮೀನನ್ನು ನಾನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ, ಬದಲಾಗಿ ನನ್ನ ಗಂಡ ಜೀವಂತ ಇದ್ದಾಗ ಮಾರಾಟ ಮಾಡಿದ್ದಾರೆ. ನಾನು, ನನ್ನ ಮಕ್ಕಳು ಮತ್ತು ನನ್ನ ಮೈದುನರು ಒಂದು ಎಕರೆ ಜಮೀನು ಮಾರಾಟ ಮಾಡಿದೆವೆ ಎಂದರೆ ಸರಿ. ವಾದಿ ಸದರಿ ಜಮೀನಿಗೆ ತಾನು ಯೊಗ್ಯ ಬೆಲೆ ಕೊಡುವುದಾಗಿ ಹೇಳಿದ್ದರೂ ಸಹ ಅವರಿಗೆ ಕೊಡಬಾರದು

ಎನ್ನುವ ಉದ್ದೇಶದಿಂದ ಬೇರೆಯವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡ ತನ್ನ ಹೆಸರಿಗೆ ಇರುವ ಟ್ರಾಕ್ಟರ ಜೀವಂತ ಇದ್ದಾಗ ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿ ಟ್ರಾಕ್ಟರ ಖರೀದಿಸುತ್ತೇನೆ ಎಂದು ವಾದಿ ನಮ್ಮನ್ನು ಕೇಳಿದ್ದರು ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ ದಾಖಲೆಗಳು ವಾದಿಗೆ ಸಂಬಂಧಪಟ್ಟದ್ದು ಅಲ್ಲ ಎಂದರೆ ಸರಿ. ನಾವು ದಾವೆಯನ್ನು ಮುಂದೂಡಲು ವಿನಾಕಾರಣ ದಾಖಲೆಗಳನ್ನು ಹಾಜರಪಡಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಪ್ರಾಮಿಸರಿ ನೋಟ ಪ್ರಕಾರ ಹಣಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ